ಶ್ರೀ ಬಿ. ಸೋಮಂಶೇಖರ್ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಆಧಾರದ ಶಿಕ್ಷಕರ ಸೇವೆಯನ್ನು ಸಕ್ರಮಗೊಳಿಸಬಾರದೆಂದು ಸರ್ಕಾರ ನಿರ್ಧರಿಸಿದೆ. ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಗಂತ್ತಿಗೆ ಆಧಾರದ ಉಪನ್ಯಾಸಕರ ಸೇವೆಯನ್ನು ಸಕ್ರಮಗೊಳಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ನೀರಿನ ತೆರಿಗೆಯನ್ನು ಮನ್ನಾ ಮಾಡುವ ಬಗ್ಗೆ

೪೧೦. ಶ್ರೀ ಜಿ. ಎನ್. ಶಿವನಂಜಪ್ಪ (ಗಂಬ್ಳಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಧುಗಿರಿ ತಾಲ್ಲೂಕು ಸರ್ಜಮ್ಮನಹಳ್ಳಿ ಗ್ರಾಮದ ಕೆರೆಯು ಇತ್ತೀಚೆಗೆ ಮಳೆಯಿಂದ ಭರ್ತಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಅಚ್ಚುಕಟ್ಟುದಾರರಿಗೆ ಹಾಯಿಸುತ್ತಿದ್ದ ಪೈಪಿನ ಕಾಲುವೆಯು ಒಡೆದು ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ರೈತರಿಗೆ ನೀರು ಒದಗಿಸದೇ ಇರುವುದರಿಂದ ೧೯೮೬-೮೭ ಹಾಗೂ ೧೯೮೭-೮೮ನೇ ಸಾಲುಗಳಲ್ಲಿ ವಿಧಿಸಿರುವ ನೀರಿನ ತೆರಿಗೆಯನ್ನು ಮನ್ನಾ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಹೌದು.

ಇ) ತಾತ್ಕಾಲಿಕ ವ್ಯವಸ್ಥೆಯ ಮೂಲಕ ನೀರನ್ನು ಉಪಯೋಗಿಸಿಕೊಂಡ ಬೆಳೆಗಳನ್ನು ಬೆಳೆದಿರುವ ರೈತರಿಗೆ ಮಾತ್ರ ನೀರಿನ ತೆರಿಗೆಯನ್ನು ವಿಧಿಸಲಾಗುವುದು.

ಕೊಡಗು ಜಿಲ್ಲೆಯಲ್ಲಿ ಗಾಳಿ ಬೀಡು ಟೀ ಯೋಜನೆ

೫೦೨. ಶ್ರೀಮತಿ. ಸುಮಾವಸಂತ್ (ವೀರಾಜಪೇಟೆ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿ ಗಾಳಿಬೀಡು ಟೀ ಯೋಜನೆಯ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನು ?

ಆ) ಈ ಯೋಜನೆಗಳು ಕಾರ್ಯಗತ ಮಾಡುವುದಾದರೆ ಅದರ ಪೂರ್ಣ ವಿವರ ಒದಗಿಸುವುದು?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಮಂತ್ರಿಗಳು).—

ಅ) ಕೊಡಗು ಜಿಲ್ಲೆಯ ಗಾಳಿಬೀಡು ಪ್ರದೇಶದಲ್ಲಿ ಕರ್ನಾಟಕ ಟೀ ಯೋಜನೆಯನ್ನು ಕೈಗೊಳ್ಳುವ ಬಗ್ಗೆ ಸರ್ಕಾರ ಈಗಾಗಲೇ ನಿರ್ಧರಿಸಿದೆ. ಈ ಯೋಜನೆಯನ್ನು ಜಂಟಿ ವಲಯದಲ್ಲಿ ಕಾರ್ಯಗತಗೊಳಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಆ) ಸ್ಥೂಲವಾಗಿ ಈ ಯೋಜನೆಯು ಕೊಡಗು ಜಿಲ್ಲೆಯ ಗಾಳಿಬೀಡು ಮತ್ತು ಕಾಳೂರು ಪ್ರದೇಶದ ೨೦೬೬ ಹೆಕ್ಟೇರು ಜಮೀನಿನಲ್ಲಿ ಗಿಡಮರಗಳಿಲ್ಲದ, ಹುಲ್ಲು ಬೆಳೆಯುವ ಪ್ರದೇಶದಲ್ಲಿ ಕೈಗೊಳ್ಳಲಾಗುವುದು. ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ನೆರವಿನಿಂದ ೫ ವರ್ಷಗಳ ಅವಧಿಯಲ್ಲಿ ಸುಮಾರು ರೂ. ೨೫೫.೭೮ ಲಕ್ಷಗಳ ವೆಚ್ಚದಲ್ಲಿ ಕಾರ್ಯರೂಪಕ್ಕೆ ತರುವ ಉದ್ದೇಶವಿದೆ. ಯೋಜನೆಯ ಮೊದಲನೆಯ ಹಂತದಲ್ಲಿ ೮೦೦ ಹೆಕ್ಟೇರ್ ಪ್ರದೇಶದಲ್ಲಿ ಟೀ ಬೆಳೆಸಲು ಯೋಚಿಸಲಾಗಿದೆ. ೫ ವರ್ಷಗಳ ಯೋಜನೆಯು ಈ ಕೆಳಕಂಡಂತಿದೆ.

೧೯೮೬-೮೭	೫೦ ಹೆಕ್ಟೇರು
೧೯೮೭-೮೮	೧೦೦ ,,
೧೯೮೮-೮೯	೨೦೦ ,,
೧೯೮೯-೯೦	೨೦೦ ,,
೧೯೯೦-೯೧	೨೫೦ ,,

ರಾಜ್ಯದ ಹಡಗುಗಳ ಬಗ್ಗೆ

೩೯೦. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಬಂದರು ಹಾಗೂ ಮೀನುಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರವು ಎಷ್ಟು ಹಡಗುಗಳನ್ನು ಹೊಂದಿದೆ ಹಾಗೂ ಸರ್ಕಾರದ ಸೇವೆಯಲ್ಲಿರುವ ಸಂಖ್ಯೆ ಎಷ್ಟು ?

ಆ) ಹಡಗುಗಳ ನಿರ್ಮಾಣ – ಮೇಲ್ವಿಚಾರಣೆ ಹಾಗೂ ಅಭಿವೃದ್ಧಿಗಾಗಿ ಮಂಡಳಿ ನಿಗಮವನ್ನು ರಚಿಸಲಾಗಿದೆಯೆ ?

ಇ) ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಕೈಗೊಳ್ಳುವ ಕ್ರಮವೇನು ?

ಶ್ರೀ ಎಂ. ರಘುಪತಿ (ಬಂದರು ಮತ್ತು ಮೀನುಗಾರಿಕೆ ಸಚಿವರು).—

ಅ) ರಾಜ್ಯ ಸರ್ಕಾರವು ಯಾವ ಹಡಗುಗಳನ್ನೂ ಹೊಂದಿರುವುದಿಲ್ಲ.

ಆ) ಇಲ್ಲ.

ಇ) ಈ ಬಗ್ಗೆ ಯಾವ ಪ್ರಸ್ತಾವನೆಯೂ ಇಲ್ಲ.

ಕರಾವಳಿ ಪ್ರದೇಶದ ಗ್ರಾಮಗಳಿಗೆ ನಾಗರೀಕ ಸೌಲಭ್ಯಗಳು

೩೫೨. ಶ್ರೀಮತಿ ಮನೋರಮ ಮಾಧ್ವರಾಜ್ (ಉಡುಪಿ).—ಮಾನ್ಯ ಬಂದರು ಹಾಗೂ ಮೀನುಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ಕರಾವಳಿ ಪ್ರದೇಶದ ಸಮುದ್ರ ತೀರದಲ್ಲಿ ವಾಸವಾಗಿರುವ ಬೆಸ್ತರ ಕುಟುಂಬಗಳ ಮಂಜೆಗಳಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಲಾಗುವುದೇ ?

ಶ್ರೀ ಎಂ. ರಘುಪತಿ (ಬಂದರು ಹಾಗೂ ಮೀನುಗಾರಿಕೆ ಮಂತ್ರಿಗಳು).—

೧) ಹೌದು.

ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕಾಗಿ ಖರ್ಚು ಮಾಡಲಾದ ಹಣ

೧. ಶ್ರೀ ಕೆ.ಹೆಚ್. ಪಾಟೀಲ್ (ಗದಗ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಕೃಷಿ ವಿಶ್ವ ವಿದ್ಯಾಲಯ ಸ್ಥಾಪನೆಯಾದಾಗಿನಿಂದ ಇದುವರೆಗೂ ಆಗಿರುವ ಖರ್ಚಿನ ವಿವರಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಕೃಷಿ ಮಂತ್ರಿಗಳು)—

೩೧-೧೨-೧೯೮೭ರವರೆಗೆ ೭,೪೦,೪೯,೮೫೨-೦೩ ರೂ.ಗಳು